# ಕರ್ನಾಟಕ ವಿಧಾನ ಪರಿಷತ್

ಮಾನ್ಯ ಸದಸ್ಯರ ಹೆಸರು : ಶ್ರೀ ಶರವಣ ಟಿ.ಎ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **79(18)**

ಉತ್ತರಿಸಬೇಕಾದ ಸಚಿವರು : ಮಾನ್ಯ ಗಣಿ ಸಚಿವರು

ಉತ್ತರಿಸಬೇಕಾದ ದಿನಾಂಕ : 13.02.2024

| ಪ್ರಶ್ನೆ | ಪ್ರಶ್ನೆಯ ವಿವರ | ಉತ್ತರ: |
|---|---|---|
| ಅ | ರಾಜ್ಯದಲ್ಲಿ ಯಾವ ಯಾವ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಎಸ್.ಐ.ಟಿ. ತನಿಖೆಗೆ ವಹಿಸಲಾಗಿದೆ. ಸದರಿ ತನಿಖೆಯು ಯಾವ ಹಂತದಲ್ಲಿದೆ; ಯಾರ್‍ಯಾರಿಗೆ ನೋಟಿಸ್ ನೀಡಲಾಗಿದೆ, ಎಂಬ ಬಗ್ಗೆ ಮಾಹಿತಿ ನೀಡುವುದು: | ವಿಶೇಷ ತನಿಖಾ ತಂಡ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಕಚೇರಿಗೆ ಈ ಕೆಳಕಂಡ ಪ್ರಕರಣಗಳನ್ನು ವಹಿಸಲಾಗಿದೆ:<br><br>1) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಸಿಐ 282 ಎಂಎಂಎಂ 2011(ಪಿ), ಬೆಂಗಳೂರು, ದಿನಾಂಕ: 22-11-2013ಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಕರ್ನಾಟಕ ಲೋಕಾಯುಕ್ತ ವರದಿ ಭಾಗ-2 ದಿನಾಂಕ:27-07-2011ರಲ್ಲಿ ಸೂಚಿಸಿರುವ ಅಕ್ರಮ ಗಣಿಗಾರಿಕೆ ಪ್ರಕರಣಗಳು ಮತ್ತು ಬೆಲಿಕೇರಿ ಬಂದರಿನಿಂದ 50,000 ಎಂ.ಟಿ.ಗೂ ಕಡಿಮೆ ಪ್ರಮಾಣದಲ್ಲಿ ರಫ್ತು ಆಗಿರುವ ಪ್ರಕರಣಗಳ ತನಿಖೆ ಮತ್ತು ಸಿ.ಬಿ.ಐ.ರವರು ಪ್ರಾಥಮಿಕ ವಿಚಾರಣೆ ಮಾಡಿರುವ 47 ಪ್ರಕರಣಗಳ ತನಿಖೆ<br><br>2) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಸಿಐ 282 ಎಂಎಂಎಂ 2011(ಪಿ), ಬೆಂಗಳೂರು, ದಿನಾಂಕ: 06-6-2017ಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಕರ್ನಾಟಕ ಲೋಕಾಯುಕ್ತ ವರದಿ ಭಾಗ-2 ಮತ್ತು ಭಾಗ-1ರಲ್ಲಿ ನಮೂದಿಸಿರುವ ಎಲ್ಲಾ ಪ್ರಕರಣಗಳ ತನಿಖೆ<br><br>3) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಸಿಐ 282 ಎಂಎಂಎಂ 2011(ಪಿ2), ಬೆಂಗಳೂರು, ದಿನಾಂಕ: 21-03-2018ಗೆ ಸಂಬಂಧಿಸಿದಂತೆ ನ್ಯೂ ಮಂಗಳೂರು ಬಂದರು, ಕಾರವಾರ ಬಂದರು, ಮರಮಗೋವಾ ಬಂದರು, ಪಣಜಿ ಬಂದರು, ಎನ್ನೋರ ಮತ್ತು ಚೆನ್ನೈ ಬಂದರಿನಿಂದ ರಫ್ತಾಗಿರುವ ಅಕ್ರಮ ಕಬ್ಬಿಣದ ಅದಿರಿನ ಬಗ್ಗೆ ತನಿಖೆ<br><br>4) ಮೇಲೆ ತಿಳಿಸಿದ ಎಲ್ಲಾ ಆದೇಶಗಳಿಗೆ ಸಂಬಂಧಿಸಿದಂತೆ ಒಟ್ಟು 104 ಪ್ರಕರಣಗಳು ಎಸ್.ಐ.ಟಿ. ದಾಖಲಿಸಿದ್ದು, 93 ಪ್ರಕರಣದಲ್ಲಿ ಅಂತಿಮ ವರದಿಯನ್ನು ಸಲ್ಲಿಸಲಾಗಿದೆ, 2 ಪ್ರಕರಣಗಳಲ್ಲಿ ಗೌರವಾನ್ವಿತ ಕರ್ನಾಟಕ ಉಚ್ಚನ್ಯಾಯಾಲಯವು ತನಿಖೆಗೆ ತಡೆಯಾಜ್ಞೆ ನೀಡಿರುತ್ತದೆ, 3ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರಿಯಿಂದ ಅಭಿಯೋಜನಾ ಮಂಜೂರಾತಿ ಆದೇಶ ಬರಬೇಕಾಗಿರುತ್ತದೆ ಮತ್ತು 6 ಪ್ರಕರಣಗಳು ತನಿಖಾ ಹಂತದಲ್ಲಿರುತ್ತದೆ.<br><br>ಕಂಡಿಕೆ (3)ರಲ್ಲಿ ನಮೂದಿಸಿರುವ ಆದೇಶಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ವಿಚಾರಣೆಗಳನ್ನು ಕೈಗೊಳ್ಳಲಾಗಿರುತ್ತದೆ.<br>ವಿಶೇಷ ತನಿಖಾ ತಂಡದ ಪ್ರಕರಣಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡವರಿಗೆ ನೋಟಿಸ್ ನೀಡಲಾಗಿರುತ್ತದೆ:<br>1) ಗಣಿ ಮತ್ತು ಭೂ ವಿಜ್ಞಾನ ಇಲಾಖೆ,<br>2) ಸಿಮಾ ಸುಂಕ ಇಲಾಖೆ<br>3) ಬಂದರು ಇಲಾಖೆ<br>4) ವಾಣಿಜ್ಯ ತೆರಿಗೆ ಇಲಾಖೆ<br>5) ಆದಾಯ ತೆರಿಗೆ ಇಲಾಖೆ<br>6) ಕಂದಾಯ ಇಲಾಖೆ<br>7) ಅರಣ್ಯ ಇಲಾಖೆ<br>8) ಬ್ಯಾಂಕುಗಳು<br>ಗಣಿ ಮಾಲೀಕರು / ರಫ್ತುದಾರರು / ಮಾರಾಟಗಾರರು / ಸಾಗಣಿಕೆದಾರರು/ ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ಇತರೆ ಸಾಕ್ಷಿದಾರರು. |

| | | |
|---|---|---|
| ಆ | ಅಕ್ರಮ ಗಣಿಗಾರಿಕೆ ಕುರಿತು ಎಸ್.ಐ.ಟಿ. ಚಾರ್ಜ್ ಶೀಟ್ ಸಲ್ಲಿಕೆ ಮಾಡಲು ಇರುವ ಅಡ್ಡಿಗಳೇನು: ತನಿಖೆ ವಿಳಂಬಕ್ಕೆ ಕಾರಣಗಳೇನು: | 1) ಕೆಲವೊಂದು ಪ್ರಕರಣಗಳಲ್ಲಿ ಆರೋಪಿತ ಸರ್ಕಾರಿ ಅಧಿಕಾರಿಗಳ ವಿರುದ್ಧ ಅಭಿಯೋಜನಾ ಮಂಜೂರಾತಿ ಆದೇಶ ಬರಬೇಕಾಗಿರುತ್ತದೆ<br>2) ಕೆಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಗೌರವಾನ್ವಿತ ಕರ್ನಾಟಕ ಉಚ್ಚನ್ಯಾಯಾಲಯವು ತನಿಖೆಗೆ ತಡೆಯಾಜ್ಞೆಯನ್ನು ನೀಡಿರುತ್ತದೆ.<br>3) ಕೆಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಅದಿರು ಮೌಲ್ಯಮಾಪನ ವರದಿಯನ್ನು ನಿರೀಕ್ಷಿಸಲಾಗಿದೆ. |
| ಇ | ಅಕ್ರಮ ಗಣಿಗಾರಿಕೆ ಬಗ್ಗೆ ತನಿಖೆ ನಡೆಸಿರುವ ಎಸ್.ಐ.ಟಿ. ಯಾವ ಕಾಲಮಿತಿಯಲ್ಲಿ ತನ್ನ ವರದಿಯನ್ನು ಸಲ್ಲಿಸಲಿದೆ: | ತನಿಖೆಯಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರಿಗಳಿಂದ ಅಭಿಯೋಜನಾ ಮಂಜೂರಾತಿ ಪಡೆದು, ತನಿಖೆಗೆ ತಡೆಯಾಜ್ಞೆ ನೀಡಿರುವ ಪ್ರಕರಣಗಳ ತಡೆಯಾಜ್ಞೆಯನ್ನು ತೆರವುಗೊಳಿಸಿ; ಅದಿರು ಮೌಲ್ಯಮಾಪನ ವರದಿಯನ್ನು ಪಡೆದು, ಬಾಕಿ ಉಳಿದಿರುವ ಪ್ರಾಥಮಿಕ ವಿಚಾರಣೆಗಳು ಹಾಗೂ ಪ್ರಕರಣಗಳ ತನಿಖೆಯನ್ನು ಪೂರ್ಣಗೊಳಿಸಿದ ನಂತರ ಎಸ್.ಐ.ಟಿ. ಸಂಪೂರ್ಣ ವರದಿಯನ್ನು ಸಲ್ಲಿಸಲಿದೆ. |

ಸಿಐ05ಎಂಐಸಿ2024

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು